# ಸಂಗೀತಕ್ಕೆ ಅಪ್ಪಾಜಿಯಿಂದ ಅಪಾರ ಕೊಡುಗೆ




ಶರಣಬಸವ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಒಂದು ದಿನದ ತಬಲಾ ಕಾರ್ಯಾಗಾರವನ್ನು ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವ ಡಾ.ಅನಿಲಕುಮಾರ ಬಿಡುವೆ ಉದ್ಘಾಟಿಸಿ ಮಾತನಾಡಿದರು. ಡಾ.ಎಂ.ಎಸ್.ಪಾಟೀಲ, ಪ್ರೊ.ಮಹೇಶ ಬಡಿಗೇರ, ಪ್ರೊ. ಷಣ್ಮುಖ ಪಾಟೀಲ ಇದ್ದರು.

> ಈ ಹಿಂದೆ ಇಂತಹ ತಬಲಾ ಕುರಿತಾದ ಕಾರ್ಯಾಗಾರ ಈ ಭಾಗದಲ್ಲಿ ಆಗಿಲ್ಲ, ಇದೊಂದು ದಾಖಲೆಯ ಕಾರ್ಯಕ್ರಮವಾಗಿದೆ. ಸಂಗೀತವು ನಮ್ಮೊಳಗೆ ಜೀವಾಮೃತದಂತೆ ಕೆಲಸ ಮಾಡುವುದು ಅಷ್ಟೇ ಅಲ್ಲ ನಮ್ಮ ದಿನನಿತ್ಯದ ಒತ್ತಡರಹಿತ ಜೀವನ ನಡೆಸಲು ಒಂದು ವರದಾನ.
>
> **- ಪ್ರೊ.ಮಹೇಶ ಬಡಿಗೇರ**
> ಪ್ರಾಧ್ಯಾಪಕ ನೂತನ ವಿದ್ಯಾಲಯ

**ವಿಕ ಸುದ್ದಿಲೋಕ** ಕಲಬುರಗಿ

ಕಲ್ಯಾಣ ಕರ್ನಾಟಕದಲ್ಲಿ ಸಂಗೀತ ಬೆಳೆಯಲು ಶ್ರೀ ಡಾ.ಶರಣಬಸವಪ್ಪ ಅಪ್ಪ ಅವರ ಕೊಡುಗೆ ಅಪಾರವಾಗಿದೆ ಎಂದು ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವ ...

ಭಾಗದಲ್ಲಿ ಪ್ರಪ್ರಥಮವಾಗಿ ಸಂಗೀತ ವಿಭಾಗ ಆರಂಭಿಸಿ ಅನೇಕ ಸಂಗೀತ ವಿದ್ವಾಂಸರನ್ನು ನಾಡಿಗೆ ನೀಡಿದ್ದಾರೆ. ಸಂಗೀತದಿಂದ ಕೇವಲ ಮನರಂಜನೆ ಮಾತ್ರವಲ್ಲ ಅದು ನಮ್ಮ ಆರೋಗ್ಯ ...

ಶರಣಬಸವ ಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಎಂ.ಎಸ್.ಪಾಟೀಲ ಮಾತನಾಡಿ, ಅನಾದಿ ಕಾಲದಿಂದಲೂ ಸಂಗೀತ ರಾಗ, ತಾಳ, ಲಯ ಬದ್ಧ ನಾದವು ವಿಶ್ವದ ಎಲ್ಲ ಸಂಸ್ಕೃತಿಗಳಲ್ಲಿ ಸಂಗೀತ ಪ್ರಕಾರಗಳಲ್ಲಿ ತನ್ನದೇ ಛಾಪು ಮೂಡಿಸುತ್ತಾ ಬಂದಿದೆ ಎಂದರು. ವಿಭಾಗ ಮುಖ್ಯಸ್ಥ ಪ್ರೊ.ರೇವಯ್ಯ ವಸ್ತ್ರದಮಠ ...

---

ಶರಣಬಸವ ವಿವಿಯಲ್ಲಿ ತಬಲಾ ಕಾರ್ಯಾಗಾರ

# ಸಂಗೀತ ವಿದ್ವಾಂಸರನ್ನು ನೀಡಿದ ಅಪ್ಪ ಶಿಕ್ಷಣ ಸಂಸ್ಥೆ

**ವಿಜಯವಾಣಿ ಸುದ್ದಿಜಾಲ** ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶ್ರೀ ಡಾ.ಶರಣಬಸವಪ್ಪ ಅಪ್ಪ ಅವರು ಪ್ರಥಮ ಬಾರಿಗೆ ಸಂಗೀತ ವಿಭಾಗ ಆರಂಭಿಸಿ ಹಲವು ಸಂಗೀತ ವಿದ್ವಾಂಸರನ್ನು ನಾಡಿಗೆ ನೀಡಿದ್ದಾರೆ ಎಂದು ಶರಣಬಸವ ವಿಶ್ವವಿದ್ಯಾಲಯ ಕುಲಸಚಿವ ಡಾ.ಅನಿಲಕುಮಾರ ಬಿಡವೆ ಕೊಂಡಾಡಿದರು.



» ಡಾ.ಅನಿಲಕುಮಾರ ಬಿಡವೆ ಅಭಿಮತ

ಶರಣಬಸವ ವಿವಿ ಸಂಗೀತ ವಿಭಾಗದಲ್ಲಿ ಮಂಗಳವಾರ ಏರ್ಪಡಿಸಿದ್ದ 'ತಬಲಾ ಪ್ರಾಯೋಗಿಕ ಯಾತ್ರಾ' ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಶರಣಬಸವೇಶ್ವರ ಸಂಸ್ಥೆಯಲ್ಲಿ ಸಂಗೀತಾಭ್ಯಾಸ ಮಾಡಿದ ಹಲವು ವಿದ್ಯಾರ್ಥಿಗಳು ನಾಡಿನೆಲ್ಲೆಡೆ ಕೀರ್ತಿ ಗಳಿಸಿದ್ದಾರೆ. ಸಂಗೀತ ಮನರಂಜನೆ ಮಾತ್ರವಲ್ಲ, ಉತ್ತಮ ಆರೋಗ್ಯಕ್ಕೆ ಔಷಧಿಯಾಗಿ ಕೆಲಸ ಮಾಡುತ್ತದೆ ಎಂದರು.

ಪ್ರಾಧ್ಯಾಪಕ ಪ್ರೊ.ಮಹೇಶ ಬಡಿಗೇರ ಮಾತನಾಡಿ, ತಬಲಾ ಕುರಿತ ಕಾರ್ಯಾಗಾರ ದಾಖಲೆಯ ಕಾರ್ಯಕ್ರಮವಾಗಿದೆ. ಸಂಗೀತ ನಮ್ಮೊಳಗೆ ಜೀವಾಮೃತದಂತೆ ಕೆಲಸ ಮಾಡುತ್ತದೆ. ಒತ್ತಡ ರಹಿತ ಜೀವನ ನಡೆಸಲು ಸಂಗೀತ ಔಷಧ ಎಂದು ಹೇಳಿದರು.

ಪ್ರಾಧ್ಯಾಪಕ ಡಾ.ಎಂ.ಎಸ್.ಪಾಟೀಲ್ ಮಾತನಾಡಿ, ಅನಾದಿ ಕಾಲದಿಂದಲೂ ಸಂಗೀತ ರಾಗ, ತಾಳ, ಲಯಬದ್ಧ ನಾದಗಳು ವಿಶ್ವದ ಎಲ್ಲ ಸಂಸ್ಕೃತಿಗಳಲ್ಲಿ ಛಾಪು ಮೂಡಿಸುತ್ತ ಬಂದಿವೆ ಎಂದರು.

ಪ್ರೊ.ರೇವಯ್ಯ ವಸ್ತ್ರದಮಠ ಮಾತನಾಡಿ, ಅಪ್ಪಾಜಿ ಮತ್ತು ಮಾತೋಶ್ರೀ ಅವರು ಸಂಗೀತ ವಿಷಯದ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಸಂಗೀತ ಅಭ್ಯಾಸಕ್ಕೆ ಎಲ್ಲ ಸೌಲಭ್ಯ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿಭಾಗದ ಪ್ರಾಧ್ಯಾಪಕ ಪ್ರೊ. ಷಣ್ಮುಖ ಪಾಟೀಲ್ ಸ್ವಾಗತಿಸಿದರು. ಕನ್ನಡ ವಿಭಾಗದ ಡಾ.ಚಿದಾನಂದ ಚಿಕ್ಕಮಠ ನಿರೂಪಣೆ ಮಾಡಿದರು. ಡಾ.ಗುರುರಾಜ ದಂಡಾಪುರ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಿದರು.

